# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ 1317–2023** **ಸಿ. ಡಬ್ಲುಃ 07**

**ಪಿ ಡಬ್ಲುಃ 02**

| | |
|---|---|
| ಸಾಕ್ಷಿದಾರರ ಹೆಸರು | ದೀಪು ಎನ್ |
| ತಂದೆ/ಗಂಡನ ಹೆಸರು | ಲಿಂಗರಾಜು ಸಿ.ಎಂ |
| ವಯಸ್ಸು | 38 ವರ್ಷ |
| ಉದ್ಯೋಗ | ಅಬಕಾರಿ ನೀರಿಕ್ಷಕರು, ಗುಂಡ್ಲುಪೇಟೆ ವಲಯ |
| ವಾಸ | ಗುಂಡ್ಲುಪೇಟೆ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 02–04–2025** |

**ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲರಿಂದಃ**

ನಾನು 2021 ರಿಂದ 2024 ನವೆಂಬರ್ ವರೆಗೆ ನಾನು  ನಂಜನಗೂಡು ಅಬಕಾರಿ ನೀರಿಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.04–04–2023 ರಂದು ಮಧ್ಯಾಹ್ನ 3.45 ಗಂಟೆ ಸಮಯದಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ಕಳಲೇ ಗೇಟ್ ಕಡೆಯಿಂದ ಇಬ್ಬರು ಆಸಾಮಿಗಳು ಒಂದು ದ್ವಿಚಕ್ರವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಏನನ್ನೋ ಇಟ್ಟುಕೊಂಡು ಬರುತ್ತಿರುವುದನ್ನು ಕಂಡು ಸಾಮಾನ್ಯ ತಪಾಸಣೆಗಾಗಿ ವಾಹನವನ್ನು ತಡೆದು ನಿಲ್ಲಿಸಿದಾಗ ಸದರಿ ಆಸಾಮಿಗಳು ಸಮವಸ್ತ್ರಧಾರಿಗಳಾದ ನಮ್ಮನ್ನು ಕಂಡು ಗಾಭರಿಗೊಂಡರು. ನಂತರ ಸದರಿ ವಾಹನವನ್ನು ಪರಿಶೀಲಿಸಲಾಗಿ ವಾಹನದ ಮುಂಭಾಗ ಪೆಟ್ರೋಲ್ ಟ್ಯಾಂಕ್ ಮೇಲೆ ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ ಇರುವುದು

ಕಂಡುಬಂದಿತು. ನಂತರ ಸದರಿ ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ಕೇಳಲಾಗಿ ಮದ್ಯ ಇರುವುದಾಗಿ ತಿಳಿಸಿದರು. ನಂತರ ದಾರಿಯಲ್ಲಿ ಹೋಗುತ್ತಿದ್ದ ಸಾರ್ವಜನಿಕರನ್ನು ಪಂಚರನ್ನಾಗಲು ಕೋರಿಕೊಂಡಾಗ ಅವರು ನಿರಾಕರಿಸಿದ್ದರಿಂದ ಇಲಾಖಾ ಸಿಬ್ಬಂದಿಗಳನ್ನೇ ಪಂಚರನ್ನಾಗಿ ಮಾಡಿಕೊಳ್ಳಲಾಯಿತು. ನ್ಯಾಯಾಲಯದಿಂದ ಶೋಧನಾ ವಾರೆಂಟ್ ಅನ್ನು ತರಲು ಸಮಯಾವಕಾಶ ಇಲ್ಲದ ಕಾರಣ ನನಗೆ ಅಬಕಾರಿ ಕಾಯ್ದೆ ಕಲಂ.54 ರ ಪ್ರಕಾರ ದತ್ತ ಅಧಿಕಾರವನ್ನು ಚಲಾಯಿಸಿ ಸ್ಥಳದಲ್ಲಿಯೇ ಶೋಧನಾ ವಾರೆಂಟ್ ಅನ್ನು ತಯಾರಿಸಿರುತ್ತೇನೆ. ಸಾಕ್ಷಿ ಶೋಧನಾ ಸಮುಚಿತ ವಾರೆಂಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಂತರ ಸದರಿ ದ್ವಿಚಕ್ರವಾಹನದ ಮುಂಭಾಗ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದು ನೋಡಲಾಗಿ ಮದ್ಯದ ಟೆಟ್ರಾಪ್ಯಾಕ್ ಗಳು ಇರುವುದು ಕಂಡುಬಂದಿತು. ಅವುಗಳನ್ನು ಎಣಿಸಿ ನೋಡಲಾಗಿ 90 ಎಂ.ಎಲ್.ನ 143 ಓರಿಜಿನಲ್ ವಿಸ್ಕಿಯ ಮದ್ಯದ ಟೆಟ್ರಾಪ್ಯಾಕ್ ಗಳು ಇದ್ದು ಅವುಗಳ ಒಟ್ಟು ಪ್ರಮಾಣ 12.870 ಲೀಟರ್ ಮದ್ಯವಾಗಿರುತ್ತದೆ. ಅವುಗಳ ಮುಖ ಬೆಲೆ ರೂ.35.13/- ರೂಪಾಯಿಗಳು ಆಗಿದ್ದು, ಅವುಗಳ ಒಟ್ಟು ಮೌಲ್ಯ ಸುವಾರು ರೂ.5,024/- ರೂಪಾಯಿಗಳು ಆಗಿದು, ನಂತರ ದ್ವಿಚಕ್ರ ವಾಹನವನ್ನು ಪರಿಶೀಲಿಸಲಾಗಿ ಸದರಿ ವಾಹನದ ಸಂ.ಕೆಎ-09-ಹೆಚ್.ಕೆ-

3640 ಹಿರೋ ಪ್ಯಾಷನ್ ಪ್ರೋ ವಾಹನ ಆಗಿತ್ತು. ನಂತರ ಸದರಿ ಆಸಾಮಿಗಳನ್ನು ಈ ರೀತಿಯಾಗಿ ಮಧ್ಯ ಹೊಂದಲು ಯಾವುದಾದರೂ ಬಿಲ್ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದರು. ನಂತರ ಯಾವ ಉದ್ದೇಶಕ್ಕಾಗಿ ಮಧ್ಯವನ್ನು ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ಕೇಳಲಾಗಿ ವಿಧಾನ ಸಭಾ ಚುನಾವಣೆ ನೀತಿ ಸಂಹಿತೆ ಜಾರಿ ಇರುವುದರಿಂದ ಪಾನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ನಂತರ ಸದರಿ ಆಸಾಮಿಗಳ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಮುಂಭಾಗದಲ್ಲಿ ಇದ್ದ ವ್ಯಕ್ತಿ ಮಾದಪ್ಪ ಅಲಿಯಾಸ್ ಬೇಕರಿ ಮಾದಪ್ಪ ಬಿನ್ ಸಿದ್ದಲಿಂಗನಾಯಕ, ಕಸುವಿನಹಳ್ಳಿ ಗ್ರಾಮ ಎಂದು ತಿಳಿಸಿದರು, ಹಿಂಭಾಗದಲ್ಲಿ ಇದ್ದ ವ್ಯಕ್ತಿಯ ಹೆಸರನ್ನು ಕೇಳಲಾಗಿ ಮಂಜುನಾಥ್ ಬಿನ್ ಲೇ.ನಂಜಶೆಟ್ಟಿ ಮಾಕನಪುರ ಗ್ರಾಮ ಎಂದು ತಿಳಿಸಿದರು. ನಂತರ ದೊರೆತ ಮಧ್ಯ, ಹಳದಿ ಬಣ್ಣದ ಪ್ಲಾಸ್ಟೀಕ್ ಮತ್ತು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡು ಘಟನಾ ಸ್ಥಳದಲ್ಲಿ ಮಧ್ಯಾಹ್ನ 4.10 ರಿಂದ 5.30 ವರೆಗೆ ಮಹಜರ್ ಕ್ರಮ ಜರುಗಿಸಿ ದೊರೆತ ಮಧ್ಯದ ಟೆಟ್ರಾಪ್ಯಾಕುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ನಮ್ಮ ಇಲಾಖಾ ನಡುವಳಿಗಳನ್ನು ಅನುಸರಿಸಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ಸಾಕ್ಷಿ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ಮಹಜರ್

ಅನ್ನು ನಾನೇ ಬರೆದಿರುತ್ತಾರೆ. ಸಾಕ್ಷಿ ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಲೀಸ್ಟ್ ಅಫ್ ಅರ್ಟಿಕಲ್ಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ನಂತರ ದೊರತೆ ಮದ್ಯ, ಮೋಟಾರ್ ಸೈಕಲ್ ಮತ್ತು ಆರೋಪಿನನ್ನು ಕಚೇರಿಗೆ ಕರೆತಂದು ಸ್ವ–ವರದಿಯನ್ನು ತಯಾರು ಮಾಡಿ ಆರೋಪಿಯ ವಿರುದ್ಧ ಪ್ರ.ವ.ವ ಅನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿ ಸ್ವ–ವರಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು, ಸಾಕ್ಷಿ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಎಂದು, ಸಾಕ್ಷಿ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ದಿ.13–04–2023 ರಂದು ಆರೋಪಿತರ ಸ್ವ–ಇಚ್ಛಾ ಹೇಳಿಕೆ ಹಾಗೂ ಚಾಸಾ–1 ರಿಂದ 3 ರವರ ಹೇಳಿಕೆಗಳನ್ನು ದಾಖಲೆಗಳನ್ನು ಮಾಡಿಕೊಂಡಿರುತ್ತೇನೆ. ನಂತರ ಆರೋಪಿತನ್ನು ಸೂಕ್ತ ಬೆಂಗಾಲಿನ ಮೇರೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಪ್ರಕರಣದ ಕಡತವನ್ನು

ಮುಂದಿನ ತನಿಖೆಗಾಗಿ ಚಾಸಾ-6 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಘಟನಾ ದಿನಾಂಕದಂದು ಅಮಾನತ್ತು ಪಡಿಸಿಕೊಳ್ಳಲಾದ ಮದ್ಯದ ಟೆಟ್ರಾಪ್ಯಾಕುಗಳನ್ನು ಮತ್ತು ಹಳದಿ ಬಣ್ಣ ಪ್ಲಾಸ್ಟೀಕ್ ಚೀಲವನ್ನು ನೋಡಿ ಗುರುತಿಸಿದ್ದು ಮದ್ಯದ ಟೆಟ್ರಾಪ್ಯಾಕುಗಳನ್ನು ಸಾಂಕೇತಿಕವಾಗಿ ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿರುತ್ತದೆ, ಹಳದಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ಈಗಾಗಲೇ ಮು.ಮಾ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು, 2 ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಗುರುತಿಸುವಿಕೆಗೆ 2 ನೇ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ಟಿ.ಆರ್ ವಕೀಲರಿಂದಃ-**

ಘಟನಾ ದಿನಾಂಕದಂದು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇದ್ದುದ್ದರಿಂದ ನಾವು 24 ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ನಾವು ಕಚೇರಿಯಿಂದ ಮಧ್ಯಾಹ್ನ 2.30 ಗಂಟೆಗೆ ರಸ್ತೆಗಾವಲು ಕರ್ತವ್ಯಕ್ಕಾಗಿ ಹೊರಟಿರುತ್ತೇವೆ. ನಾನು ರಸ್ತೆಗಾವಲಿಗೆ ಹೋದಾಗ ನನ್ನೊಂದಿಗೆ ಚಾಸಾ-1 ರಿಂದ 3 ರವರು ಬಂದಿರುತ್ತಾರೆ. ನಾನು ರಸ್ತೆಗಾವಲಿಗೆ ಹೊರಡುವ ಪೂರ್ವದಲ್ಲಿ ಕಚೇರಿಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ 4 ನೇ ಪುಟದಲ್ಲಿ ನಾನು

ಎರಡು ಸಾಲುಗಳನ್ನು ಚಿತ್ತು ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಚಿತ್ತು ಮಾಡಿರುವುದನ್ನು ಪಂಚರು ಸಹಿ ಪಡೆಯುವ ಪೂರ್ವದಲ್ಲಿಯೇ ಮಾಡಿರುತ್ತೇನೆ. ನಿಪಿ–1 ರಲ್ಲಿ ಚಿತ್ತು ಮಾಡಿರುವ ಸಂಬಂಧ ಒಕ್ಕಣೆಯನ್ನು ಬರೆಯಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ತೊಂದರೆ ಇರಲಿಲ್ಲ, ಆದರೆ ಸದರಿ ಚಿತ್ತು ಮಾಡಿರುವ ಸ್ಥಳದಲ್ಲಿ ಚಿತ್ತು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–4 ರಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಹೊರತುಪಡಿಸಿ ಮುದ್ರಿಸಿರುವ ಶೋಧನಾ ಸಮುಚಿತ ಮಾದರಿ ಯಾವಾಗಲು ನಮ್ಮ ಬಳಿ ಇರುತ್ತದೆ ಎಂದರೆ ಸರಿ. ನಿಪಿ–4 ಅನ್ನು ಯಾಂತ್ರಿಕವಾಗಿ ಬರೆಯಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಕಣ್ತಪ್ಪಿನಿಂದ ಆ ರೀತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಶೋಧನಾ ಸಮುಚಿತ ಆಧಾರದಲ್ಲಿ ವರ್ತಮಾನ ದೊರೆತ ಸಮಯವನ್ನು ನಮೂದು ಮಾಡಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಕಣ್ತಪ್ಪಿನಿಂದ ಆ ರೀತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಾದರಿ ಸೀಲಿನ ನಕಲಿನ 2 ನೇ ಸೀಲಿನಲ್ಲಿ 28 ಎಂಬ ಅಕ್ಷರವು ಸ್ಪಷ್ಟವಾಗಿ ಕಾಣುತ್ತಿದ್ದು, 3 ಎಂಬುದು ಸ್ಪಷ್ಟವಾಗಿ ಕಾಣುತ್ತಿಲ್ಲ. ನಿಪಿ–2 ಮಾದರಿ ಸೀಲಿನ ನಕಲನ್ನು ನಾನು ನಮ್ಮ ಕಚೇರಿಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ–2 ಅನ್ನು ನಮ್ಮ ಕಚೇರಿಯಲ್ಲಿ ತಯಾರು ಮಾಡಿದ್ದರೂ ಸಹ ಘಟನಾ ಸ್ಥಳದಲ್ಲಿ ತಯಾರು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಅನ್ನು

ತಯಾರು ಮಾಡಿರುವುದಿಲ್ಲ ಅದನ್ನು ಕಚೇರಿಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳಿಗೆ ಸಹಿಯನ್ನು ಪಡೆದಿರುವುದಿಲ್ಲ. ನಾನು ಆರೋಪಿಗಳ ಸ್ವ-ಇಚ್ಛಾ ಹೇಳಿಕೆಗಳಿಗೆ ಆರೋಪಿತರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-1 ರಿಂದ 3 ರವರು ನಮ್ಮ ಇಲಾಖಾ ಸಿಬ್ಬಂದಿಗಳು ಆಗಿರುವುದರಿಂದ ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಸ್ವ-ಇಚ್ಛಾ ಹೇಳಿಕೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರ.ವ.ವ ಅನ್ನು ಸಂಜೆ 4.00 ಗಂಟೆಗೆ ತಯಾರಿಸಿರುತ್ತೇನೆ. ಪ್ರ.ವ.ವ ಅನ್ನು ತಯಾರಿಸಲು ಸುಮಾರು ಅರ್ಧಗಂಟೆ ಸಮಯ ತೆಗೆದುಕೊಂಡಿದ್ದು ಅಂದರೆ 4.00 ರಿಂದ 4.30 ಗಂಟೆ ಆಗಿರುತ್ತದೆ. ನಾನು ಪ್ರ.ವ.ವ ಅನ್ನು ದಿ.04-04-2023 ರಂದು ನಮ್ಮ ಕಚೇರಿಯಲ್ಲಿ ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಾನು ಘಟನಾ ದಿನಾಂಕದಂದು ಯಾವ-ಯಾವ ಸ್ಥಳಗಳಿಗೆ ರಸ್ತೆಗಾವಲಿಗೆ ಹೋಗಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ-1 ಅನ್ನು ಸಹ ನಮ್ಮ ಕಚೇರಿಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೂ ನಮ್ಮ ಕಚೇರಿಗೂ ಸುಮಾರು 10 ಕಿ.ಮೀ ಅಂತರ ಇರಬಹುದು. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದೇ ಸಮಯದಲ್ಲಿ ಸುಮಾರು 10 ಕಿ.ಮೀ ಅಂತರದಲ್ಲಿ ಇರುವ ಎರಡು ಸ್ಥಳಗಳಲ್ಲಿ ಇರಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಹೇಳುವಂತೆ ಘಟನಾ

ಸ್ಥಳದಲ್ಲಿ ಸಂಜೆ 4.30 ರಿಂದ 5.00 ವರೆಗೆ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಶೋಧನಾ ಸಮುಚಿತ ವರದಿಯನ್ನು ತಯಾರು ಮಾಡಿರುವುದಿಲ್ಲ  ಎಂದರೆ ಸರಿಯಲ್ಲ. ಚುನಾವಣಾ ನೀಂತಿ ಸಂಹಿತೆ ಜಾರಿಯಲ್ಲಿ ಇದ್ದುದ್ದರಿಂದ ನಮ್ಮ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ  ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುವುದರಿಂದಲೇ ಘಟನಾ ಸ್ಥಳದಲ್ಲಿ  ಸಾರ್ವಜನಿಕರ ಸಹಿ ಪಡೆಯದೇ, ನನ್ನ ಇಲಾಖಾ ಸಿಬ್ಬಂದಿಗಳ ಸಹಿಯನ್ನು ಮಾತ್ರ ನಿಪಿ-1 ಕ್ಕೆ ಪಡೆದಿರುತ್ತೇನೆ  ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**